# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.02 | Issue.263 | Pages.2 | Date:02-10-2026, FRIDAY    RNI NO: KARKAN/2024/89601    Kannada Daily

ಸಂಪುಟ : 02 – ಸಂಚಿಕೆ : 263 – ಪುಟಗಳು: 2    02–10–2026    ಶುಕ್ರವಾರ    Ph. 8762954248    ದರ: ರೂ. 1

## ಕಾಫಿ ಬೆಳೆಗಾರರ ಸಂಕಷ್ಟ ನಗರವಾಸಿಗಳಿಗೆ ಅರ್ಥವಾಗದು: ಶಾಸಕ ಸಿಮೆಂಟ್ ಮಂಜು

### ■ಸಕಲೇಶಪುರದಲ್ಲಿ 12ನೇ ಅಂತರರಾಷ್ಟ್ರೀಯ ಕಾಫಿ ದಿನಾಚರಣೆ

### ■ಸಂಸತ್‌ನಲ್ಲಿ ಧ್ವನಿ ಎತ್ತುವ ಭರವಸೆ ನೀಡಿದ ಸಂಸದ ಶ್ರೇಯಸ್ ಪಟೇಲ್

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಹೊರನೋಟಕ್ಕೆ ಸಮೃದ್ಧವಾಗಿ ಕಾಣುವ ಕಾಫಿ ಬೆಳೆಗಾರರು ತೋಟದಲ್ಲಿ ಅನುಭವಿಸುವ ಶ್ರಮ ಮತ್ತು ಸಂಕಷ್ಟಗಳು ನಗರವಾಸಿಗಳಿಗೆ ಅರ್ಥವಾಗುವುದಿಲ್ಲ. ರೈತರು ಹೊಲದಲ್ಲಿ ಎಷ್ಟು ಶ್ರಮಿಸುತ್ತಾರೋ, ಅದೇ ರೀತಿ ಕಾಫಿ ಬೆಳೆಗಾರರು ತೋಟದಲ್ಲಿ ದಿನವಿಡೀ ದುಡಿಯುತ್ತಾರೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ರಾಷ್ಟ್ರೀಯ ಹೆದ್ದಾರಿ 75ರ ಒಸ್ಸೂರು ಹೋಟೆಲ್ ಸಮೀಪ ಆಯೋಜಿಸಲಾಗಿದ್ದ '12ನೇ ಅಂತರರಾಷ್ಟ್ರೀಯ ಕಾಫಿ ದಿನಾಚರಣೆ'ಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

"ನಗರ ಪ್ರದೇಶದಲ್ಲಿರುವವರಿಗೆ ಕಾಫಿ ಬೆಳೆಗಾರರು ಸುಖವಾಗಿದ್ದಾರೆ, ಯಾವುದೇ ಸಮಸ್ಯೆ ಇಲ್ಲ ಎಂಬ ಭಾವನೆ ಇರಬಹುದು. ಆದರೆ ಬೆಳಗ್ಗೆಯಿಂದ ಸಂಜೆವರೆಗೆ ತೋಟದಲ್ಲಿ ಅವರು ಪಡುವ ಕಷ್ಟ ಅವರಿಗಷ್ಟೇ ಗೊತ್ತು. ಈ ಭಾಗದ ಶಾಸಕನಾಗಿ ಬೆಳೆಗಾರರ ಬದುಕು, ಕಾರ್ಮಿಕರ ಕೊರತೆ ಹಾಗೂ ಜ್ವಲಂತ ಸಮಸ್ಯೆಗಳನ್ನು ಹತ್ತಿರದಿಂದ ಕಂಡಿದ್ದೇನೆ.




ಈ ಎಲ್ಲ ಸಮಸ್ಯೆಗಳ ಬಗ್ಗೆ ವಿಧಾನಸೌಧ ಸೇರಿದಂತೆ ಸರ್ಕಾರದ ಮಟ್ಟದಲ್ಲಿ ಪ್ರಾಮಾಣಿಕವಾಗಿ ದನಿ ಎತ್ತುವ ಕೆಲಸ ಮಾಡುತ್ತಿದ್ದೇನೆ" ಎಂದರು.

**ಸಮಸ್ಯೆಗಳ ಸರಮಾಲೆ, ಬೇಕಿದೆ ಒಗ್ಗಟ್ಟು:**

"ತೋಟಗಳಲ್ಲಿ ಕಾರ್ಮಿಕರ ಕೊರತೆ ಪ್ರಮುಖ ಸಮಸ್ಯೆಯಾಗಿದೆ. ಜೊತೆಗೆ, ಡೀಮ್ಡ್ ಫಾರೆಸ್ಟ್ ಸಮಸ್ಯೆಯೂ ಗಂಭೀರವಾಗಿದ್ದು, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ವೈಜ್ಞಾನಿಕ ಸಮೀಕ್ಷೆ ನಡೆಸಿ ವಾಸ್ತವ ಅರಣ್ಯ ಹಾಗೂ ಕೃಷಿ ಜಮೀನನ್ನು ಪ್ರತ್ಯೇಕಿಸಬೇಕಿದೆ. ಸೆಕ್ಷನ್–4, ಕಸ್ತೂರಿರಂಗನ್ ವರದಿ ಹಾಗೂ ಕಾಡುಪ್ರಾಣಿಗಳ ಹಾವಳಿಯಿಂದ ರೈತರು ಆತಂಕದಲ್ಲಿದ್ದಾರೆ. ಯಾವುದೇ ಸರ್ಕಾರವಿದ್ದರೂ ಬೆಳೆಗಾರರ ಹಿತ ಕಾಯಬೇಕು. ಸಕಲೇಶಪುರವನ್ನೂ ಬರಪೀಡಿತ ಪಟ್ಟಿಗೆ ಸೇರಿಸುವಂತೆ ಮುಖ್ಯಮಂತ್ರಿಯವರನ್ನು ಒತ್ತಾಯಿಸಿದ್ದೇನೆ. ಇವೆಲ್ಲದಕ್ಕೂ ಪರಿಹಾರ ಸಿಗಬೇಕಾದರೆ ರೈತರು ಮತ್ತು ಬೆಳೆಗಾರರು ಒಗ್ಗಟ್ಟಿನಿಂದ ಹೋರಾಡಬೇಕು" ಎಂದು ಶಾಸಕರು ಕರೆ ನೀಡಿದರು.

**ಸಂಸತ್‌ನಲ್ಲಿ ದನಿ ಎತ್ತುವೆ: ಸಂಸದ ಶ್ರೇಯಸ್ ಪಟೇಲ್**

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಹಾಸನ ಸಂಸದ ಶ್ರೇಯಸ್ ಎಂ. ಪಟೇಲ್, "ಕಾಫಿ ಬೆಳೆಗಾರರು ಕಾಡಾನೆ ಹಾವಳಿ, ಕಾರ್ಮಿಕರ ಕೊರತೆ, ಅರಣ್ಯ ಸಮಸ್ಯೆಗಳಂತಹ ಹತ್ತು–ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಸಕಲೇಶಪುರ ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸುವಂತೆ ಸರ್ಕಾರದ ಗಮನ ಸೆಳೆಯಲಾಗುವುದು. ನನಗೆ ನೀಡಿರುವ ಐದು ವರ್ಷಗಳ ಅವಧಿಯಲ್ಲಿ ಬೆಳೆಗಾರರ ಸಮಸ್ಯೆಗಳ ಕುರಿತು ಸಂಸತ್‌ನಲ್ಲಿ ಪ್ರಾಮಾಣಿಕವಾಗಿ ಧ್ವನಿ ಎತ್ತುತ್ತೇನೆ" ಎಂದು ಭರವಸೆ ನೀಡಿದರು.

"ನನಗೆ ಕಾಫಿ ಎಂದರೆ ವಿಶೇಷ ಅಭಿಮಾನ. ಸಂಸತ್‌ನಲ್ಲಿ ಭಾಷಣ ಮಾಡುವಾಗಲೂ ಕಾಫಿ ಕುಡಿಯುವ ಅಭ್ಯಾಸ ನನಗಿದೆ. ರಾಜ್ಯ ಹಾಗೂ ಹೊರರಾಜ್ಯಗಳ ಸಂಸದರಿಗೆ ಫಿಲ್ಟರ್ ಕಾಫಿ ಪುಡಿ ನೀಡುವ ಮೂಲಕ ಸಕಲೇಶಪುರದ ಕಾಫಿಯನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಲು ಪ್ರಯತ್ನಿಸುತ್ತೇನೆ" ಎಂದು ಅವರು ತಿಳಿಸಿದರು.

**ಬೆಳೆಗಾರರ ಒಗ್ಗಟ್ಟಿನ ವೇದಿಕೆ:**

ಹಾಸನ ಜಿಲ್ಲಾ ಬೆಳೆಗಾರರ ಸಂಘದ ಅಧ್ಯಕ್ಷ ಮಂಜುನಾಥ್ ಶೆಟ್ಟಿ ಮಾತನಾಡಿ, "ಕಳೆದ 11 ವರ್ಷಗಳಿಂದ ಕಾಫಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಬೆಳೆಗಾರರು ಒಂದೆಡೆ ಸೇರಿ ಕಾಫಿ ಸಂಸ್ಕೃತಿಯನ್ನು ಬೆಳೆಸುವುದು ಇದರ ಉದ್ದೇಶ. ಮುಂದಿನ ವರ್ಷ ಎಚ್.ಡಿ.ಪಿ.ಎ ಯ 50ನೇ ವರ್ಷದ ಕಾರ್ಯಕ್ರಮವಿದ್ದು, ಮುಖ್ಯಮಂತ್ರಿಯವರನ್ನು ಕರೆತರುವ ಜವಾಬ್ದಾರಿಯನ್ನು ಸಂಸದರಿಗೆ ವಹಿಸಲಾಗಿದೆ. ಕಾಡಾನೆ ದಾಳಿಯಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ಒದಗಿಸಲು ಸಂಘಟನೆ ಶ್ರಮಿಸಲಿದೆ" ಎಂದರು.

ಕೆಜಿಎಫ್ ಪ್ರಧಾನ ಕಾರ್ಯದರ್ಶಿ ಟಿ.ಪಿ. ಸುರೇಂದ್ರ ಮಾತನಾಡಿ, "ದೇಶದ ಆರ್ಥಿಕತೆಗೆ ಕಾಫಿ ಕ್ಷೇತ್ರದ ಕೊಡುಗೆ ಅಪಾರ. ಉಪಗ್ರಹ ಚಿತ್ರಗಳಲ್ಲಿ ಕಾಫಿ ತೋಟ ಹಾಗೂ ಅರಣ್ಯ ಒಂದೇ ರೀತಿ ಕಾಣುವುದರಿಂದ ಗೊಂದಲಗಳಾಗುತ್ತಿವೆ. ಭಾರತದ ಕಾಫಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಬೆಲೆ ಸಿಗಬೇಕಾದರೆ ಕೊಯ್ಲೋತ್ತರ ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡಬೇಕು" ಎಂದು ಸಲಹೆ ನೀಡಿದರು.

**ಗಮನ ಸೆಳೆದ 8 ಸಾವಿರ ಕಪ್ ಉಚಿತ ಕಾಫಿ ವಿತರಣೆ:**

ಕಾರ್ಯಕ್ರಮವನ್ನು ಕಾಫಿ ಗಿಡ ನೆಟ್ಟು, ನೀರು ಎರೆಯುವ ಮೂಲಕ ವಿನೂತನವಾಗಿ ಉದ್ಘಾಟಿಸಲಾಯಿತು. ಸ್ಥಳದಲ್ಲಿ 30ಕ್ಕೂ ಹೆಚ್ಚು ಕೃಷಿ ಹಾಗೂ ವಿವಿಧ ಮಳಿಗೆಗಳು ಗಮನ ಸೆಳೆದವು. ಕುಂಬರಡಿ ಮೂಕಾಂಬಿಕಾ ಟ್ರೇಡರ್ಸ್ ವತಿಯಿಂದ ಹೆದ್ದಾರಿಯಲ್ಲಿ ಸಾಗುವ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ಬರೋಬ್ಬರಿ 8 ಸಾವಿರ ಕಪ್ ಉಚಿತ ಕಾಫಿ ವಿತರಿಸಿದ್ದು ವಿಶೇಷವಾಗಿತ್ತು.

ಇದೇ ವೇಳೆ ಹಿರಿಯ ಕಾಫಿ ಬೆಳೆಗಾರ ಬಿ.ಎಸ್. ಕುಮಾರ್, ಉತ್ತಮ ಕಾಫಿ ಪೂರೈಸುತ್ತಿರುವ ಬೇಲೂರಿನ ಅನಘ ಗ್ರ್ಯಾಂಡ್ ಹೋಟೆಲ್‌ನ ಲೋಕೇಶ್ ಹಾಗೂ ಉಚಿತ ಕಾಫಿ ವಿತರಿಸಿದ ಅಶೋಕ್ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕೆಜಿಎಫ್ ಉಪಾಧ್ಯಕ್ಷ ಬೆಕ್ಕನಹಳ್ಳಿ ನಾಗರಾಜ್, ಮಾಜಿ ಅಧ್ಯಕ್ಷ ಜಯರಾಮ್, 'ಇಂಡಿಯಾ–2022' ವಿಜೇತೆ ಹೇಮಾ ನಿರಂಜನ್, 'ಮಿಸ್ ಟೀನ್ ಟ್ಯಾಲೆಂಟ್' ಸಾನ್ವಿ ವಿಸ್ಮಯ, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಟ್ರಸ್ಟ್ ಅಧ್ಯಕ್ಷ ಕ್ಯಾನಹಳ್ಳಿ ಸುಬ್ರಮಣ್ಯ ಸೇರಿದಂತೆ ಸಂಘದ ಪದಾಧಿಕಾರಿಗಳು, ಕಾಫಿ ಬೆಳೆಗಾರರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಕ್ರೆಡಿಟ್ ಜಟಾಪಟಿಗೆ ಯೋಗೀಶ್ ಲೇವಡಿ



ಹಾಸನ: ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯ ಕ್ರೆಡಿಟ್ ತೆಗೆದುಕೊಳ್ಳಲು ಹಾಲಿ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಮತ್ತು ಮಾಜಿ ಶಾಸಕ ಪ್ರೀತಂಗೌಡ ಜಟಾಪಟಿಗೆ ಬಿದ್ದಿದ್ದಾರೆ. ಆದರೆ ಪ್ರೀತಂಗೌಡ ಅವರದು ಶೂನ್ಯ ಕೊಡುಗೆ ಎಂದು ಆಪ್ ಮುಖಂಡ ಅಗಿಲೆ ಯೋಗೀಶ್ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ನಾನು ಇದೇ ಯೋಜನೆಗಾಗಿ ಹೋರಾಟ ಆರಂಭಿಸಿದಾಗ ತೊಂದರೆ ಕೊಟವರುಇದೇ ಪ್ರೀತಂಗೌಡ ಎಂದು ಕಿಡಿಕಾರಿದರು. ನಿಜವಾಗಿ ಯೋಜನೆ ಮಾಡಿದ್ದು ಮಾಜಿ ಸಚಿವ ಬಿ.ಶಿವರಾಂ, ಈಗ ಕೆಟ್ಟು ಹೋಗಿರುವ ಮೋಟಾರ್ ರಿಪೇರಿ ಮಾಡಿಸಲು ರೈತ ಮುಖಂಡರು ಹೋರಾಟ ಆರಂಭಿಸಿದರು. ಆದರೀಗ ಅದರ ಲಾಭ ಪಡೆಯಲು ಜಟಾಪಟಿ ಆರಂಭಿಸುವುದು ದುರದೃಷ್ಟಕರ ಎಂದರು.

2018 ನಾನು ಸಾಲಗಾಮೆಯಲ್ಲಿ ಹೋರಾಟ ಸಭೆ ಆರಂಭಿಸಿದಾಗ ಮಾಜಿ ಶಾಸಕರ ಬೆಂಬಲಿಗರು ಕಡದರಹಳ್ಳಿ ಬಳಿ ಜೆಸಿಬಿಯಲ್ಲಿ ಕೊರೆಸುವ ಮೂಲಕ ನೀರು ಬಿಡಿಸುವ ನಾಟಕವಾಡಿದರು.ಆದರೆ ನೀರು ಬರಲಿಲ್ಲ. ಬದಲಾಗಿ ನನ್ನ ಮೇಲೆ ಹಲವು ಕೇಸ್ ಹಾಕಿಸಿದರು ಎಂದು ದೂರಿದರು.

ಪ್ರೀತಂಗೌಡ ಅವರು ಒಂದು ಬಾರಿ ಶಾಸಕರಾದರೂ ಸೀಗೆ ಕೆರೆಗೆ ನೀರು ಹರಿಯಲಿಲ್ಲ. ಕೆಟ್ಟು ಹೋದ ಯಂತ್ರಗಳನ್ನು ರಿಪೇರಿ ಮಾಡಿಸಿ ನೀರು ಕೊಡಿ ಎಂದು ರೈತರು ಹೋರಾಟ ಮಾಡಿದರೆ ಇವರು ಲಾಭ ಪಡೆಯಲು ಹಸಿರು ಶಾಲು ಹಾಕಿಕೊಂಡು ಹೋಗಿರುವುದು ನಾಚಿಕೆಗೇಡು ಎಂದು ವ್ಯಂಗ್ಯವಾಡಿದರು.

ಹಿಂದೆ ಪ್ರೀತಂಗೌಡ ಅವರು ಹುಡಾದಿಂದ ಲೇಔಟ್ ಮಾಡಲು ತಲೆ ಕೆಡಿಸಿಕೊಂಡಷ್ಟು, ನೀರಾವರಿಯೋಜನೆ ಸಾಕಾರಗೊಳಿಸಲು ತೋರಿಸಲಿಲ್ಲ. ಈಗ ಬಿಜೆಪಿಯವರು ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ಮಾಡಿದರೆ ರಾಜ್ಯ ಪ್ರಧಾನ ಕಾರ್ಯದರ್ಶಿ ಆಗಿರುವ ಪ್ರೀತಂಗೌಡರು ಭಾಗಿಯಾಗಲ್ಲ. ಆದರೆ ಗಣೇಶ ಮೆರವಣಿಗೆಯಲ್ಲಿ ಭಾಗಿಯಾಗುತ್ತಾರೆ. ಇವರು ಯಾವ ಪಕ್ಷದಲ್ಲಿ ಇದ್ದಾರೆ ಎಂಬ ಅನುಮಾನ ಕಾಡುತ್ತಿದೆ ಎಂದು ಲೇವಡಿ ಮಾಡಿದರು.

ಈಗಲೂ ಪ್ರೀತಂಗೌಡ ಅವರಿಗೆ ಬದ್ಧತೆ ಇದ್ದರೆ ಯಂತ್ರಗಳನ್ನ ಸರಿಮಾಡಿಸಿ ನೀರು ಹರಿಸಲಿ ಎಂದು ಸವಾಲು ಹಾಕಿದರು. ಸುದ್ದಿಗೋಷ್ಠಿಯಲ್ಲಿ ಆಪ್ ಜಿಲ್ಲಾಧ್ಯಕ್ಷ ತೇಜೂರು ಮಂಜು, ನಗರಾಧ್ಯಕ್ಷ ಮಧು ಇದ್ದರು.

## ಕೆರೆಗಳಿಗೆ ನೀರು ತುಂಬಿಸುವ ಯೋಜನೆ: 1.05 ಕೋಟಿ ರೂ. ಅನುದಾನ ಬಿಡುಗಡೆಗೆ ಸಚಿವ ಚಲುವರಾಯಸ್ವಾಮಿ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

**ಸಂಸದ ಶ್ರೇಯಸ್ ಪಟೇಲ್ ಮನವಿಗೆ ಸ್ಪಂದನೆ**



ಹಾಸನ: ತಾಲ್ಲೂಕಿನ ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ವ್ಯಾಪ್ತಿಯ ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಯ ವಿದ್ಯುತ್ ಸಂಪರ್ಕ ಕಾಮಗಾರಿಗೆ 1.05 ಕೋಟಿ ರೂ. (?1,05,09,162) ಅನುದಾನ ಬಿಡುಗಡೆ ಮಾಡುವಂತೆ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಅವರು ಗುರುವಾರ ಸೂಚನೆ ನೀಡಿದ್ದಾರೆ.

ಹಾಸನ ತಾಲ್ಲೂಕಿನ ದುದ್ದ ಮತ್ತು ಶಾಂತಿಗ್ರಾಮ ಹೋಬಳಿಯ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಹೇಮಾವತಿ ನದಿಯಿಂದ ಕುಡಿಯುವ ನೀರು ತುಂಬಿಸುವ ಯೋಜನೆ ಇದಾಗಿದೆ. ಈ ಯೋಜನೆಯ ಮೊದಲ ಹಾಗೂ ಎರಡನೇ ಹಂತದ ಕಾಮಗಾರಿಗಳಿಗಾಗಿ ಮಾವಿನಕೆರೆ ಮತ್ತು ಮರ್ಕುಳಿ ಗ್ರಾಮಗಳಲ್ಲಿ 66 ಕೆ.ವಿ. ಸಾಮರ್ಥ್ಯದ ವಿದ್ಯುತ್ ಸಂಪರ್ಕ ಕಲ್ಪಿಸುವುದು ಅತ್ಯಗತ್ಯವಾಗಿತ್ತು.

ಈ ಹಿನ್ನೆಲೆಯಲ್ಲಿ ವಿದ್ಯುತ್ ಸಂಪರ್ಕ ಕಾಮಗಾರಿಗೆ ಅಗತ್ಯವಿರುವ ಅನುದಾನವನ್ನು ತಕ್ಷಣವೇ ಒದಗಿಸುವಂತೆ ಹಾಸನ ಸಂಸದ ಶ್ರೇಯಸ್ ಎಂ. ಪಟೇಲ್ ಅವರು ಇತ್ತೀಚೆಗೆ ಸಚಿವ ಚಲುವರಾಯಸ್ವಾಮಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದರು.

ಸಂಸದರ ಈ ಮನವಿಗೆ ತ್ವರಿತವಾಗಿ ಸ್ಪಂದಿಸಿರುವ ಸಚಿವರು, ಕಾಮಗಾರಿಗೆ ತಡೆಯಾಗದಂತೆ ಕೂಡಲೇ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವಂತೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕುಡಿಯುವ ನೀರಿನ ಬವಣೆ ನೀಗಲಿರುವ ಯೋಜನೆ:

ಈ ಮಹತ್ವಾಕಾಂಕ್ಷಿ ಯೋಜನೆಯು ಪೂರ್ಣಗೊಂಡರೆ ದುದ್ದ ಮತ್ತು ಶಾಂತಿಗ್ರಾಮ ಹೋಬಳಿಗಳ ವ್ಯಾಪ್ತಿಯ ಕೆರೆ–ಕಟ್ಟೆಗಳಿಗೆ ಹೇಮಾವತಿ ನೀರು ತುಂಬಿಸಲು ಅನುಕೂಲವಾಗಲಿದೆ. ಇದರಿಂದ ಈ ಭಾಗದ ಅಂತರ್ಜಲ ಮಟ್ಟ ವೃದ್ಧಿಯಾಗುವುದರ ಜೊತೆಗೆ, ಸ್ಥಳೀಯರ ಬಹುಕಾಲದ ಕುಡಿಯುವ ನೀರಿನ ಬವಣೆ ಶಾಶ್ವತವಾಗಿ ನೀಗಲಿದೆ ಎಂದು ನಿರೀಕ್ಷಿಸಲಾಗಿದೆ.

## ಅಂಗನವಾಡಿ ಕಾರ್ಯಕರ್ತರ ಸೇವೆ ಶ್ಲಾಘನೀಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಬೇಲೂರು: ಇಂದಿನ ಮಕ್ಕಳು ಮುಂದಿನ ಪ್ರಜೆಗಳಾಗಿದ್ದು, ಅವರ ಆರೋಗ್ಯಕರ ಬೆಳವಣಿಗೆಗೆ ಪೌಷ್ಟಿಕ ಆಹಾರ, ಸ್ವಚ್ಛತೆ ಹಾಗೂ ಉತ್ತಮ ವಾತಾವರಣ ಕಲ್ಪಿಸುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ತಾಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರು ಹಾಗೂ ಅಧಿಕಾರಿ ವರ್ಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ರೋಟರಿ ಕ್ಲಬ್ ಬೇಲೂರು ಹಾಗೂ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಹಾಗೂ ವಿಶ್ವ ಪೌಷ್ಟಿಕ ಆಹಾರ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿ, ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ತಲುಪಿಸುವಲ್ಲಿ ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದರು. ಮಕ್ಕಳ



ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೌಷ್ಟಿಕ ಆಹಾರ ಅತ್ಯಂತ ಮುಖ್ಯವಾಗಿದೆ. ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದರ ಜೊತೆಗೆ ಆರೋಗ್ಯ, ಸ್ವಚ್ಛತೆ ಮತ್ತು ಪೌಷ್ಟಿಕತೆಯ ಕುರಿತು ಅರಿವು ಮೂಡಿಸಲಾಗುತ್ತಿದೆ. ಗರ್ಭಿಣಿಯರು ಹಾಗೂ ಬಾಣಂತಿಯರ ಆರೋಗ್ಯದ ಬಗ್ಗೆಯೂ ಇಲಾಖೆ ವಿಶೇಷ ಕಾಳಜಿ ವಹಿಸುತ್ತಿರುವುದು ಮೆಚ್ಚುವಂತಹ ಕಾರ್ಯವಾಗಿದೆ ಎಂದು ಹೇಳಿದರು.

ತಾಲೂಕಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರಿಗೆ ಅಗತ್ಯ ಮಾರ್ಗದರ್ಶನ ಹಾಗೂ ಸಹಕಾರ ನೀಡುತ್ತಿದ್ದಾರೆ. ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ. ಶಿವರಾಜು, ಆರೋಗ್ಯವಂತ ತಾಯಿ ಹಾಗೂ ಆರೋಗ್ಯವಂತ ಮಗು ಹೊಂದಿರುವ ಸಮಾಜವೇ ದೇಶದ ಬಲವಾಗಿದ್ದು, ಗರ್ಭಿಣಿಯರು ಹಾಗೂ ಮಕ್ಕಳ ಪೌಷ್ಟಿಕ ಆಹಾರ ಮತ್ತು ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಹೇಳಿದರು.

ರಾಷ್ಟ್ರೀಯ ಪೋಷಣ್ ಮಾಸಾಚರಣೆ ಅಂಗವಾಗಿ ಗರ್ಭಿಣಿಯರು ಹಾಗೂ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ. ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರ ದೊರೆಯುವುದರ ಜೊತೆಗೆ ಗರ್ಭಿಣಿಯರ ಆರೋಗ್ಯದ ಬಗ್ಗೆಯೂ ನಿರಂತರ ಕಾಳಜಿ ವಹಿಸಬೇಕು ಎಂದರು.

'ನಮ್ಮ ಅಂಗನವಾಡಿ?ನಮ್ಮ ಜವಾಬ್ದಾರಿ ಎಂಬ ಆಶಯದೊಂದಿಗೆ ಅಂಗನವಾಡಿ ಕೇಂದ್ರಗಳನ್ನು ಸ್ವಚ್ಛವಾಗಿ, ಆರೋಗ್ಯಕರವಾಗಿ ಮತ್ತು ಮಕ್ಕಳ ಸ್ನೇಹಿಯಾಗಿ ರೂಪಿಸುವ ಜವಾಬ್ದಾರಿ ಎಲ್ಲರದ್ದಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ಪೌಷ್ಟಿಕ ಆಹಾರದ ಮಹತ್ವದ ಕುರಿತು ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ವೆಂಕಟೇಶ್, ಮೇಲ್ವಿಚಾರಕರಾದ ತೇಜಸ್ವಿನಿ, ಮಮತಾ, ಶಶಿಕಲಾ, ದಯಾನಂದ್, ಅಂಗನವಾಡಿ ಶಿಕ್ಷಕಿ ಪಲ್ಲವಿ ಲೋಹಿತ್, ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರು ಹಾಗೂ ವಿವಿಧ ಗಣ್ಯರು ಉಪಸ್ಥಿತರಿದ್ದರು.

## ಬಡತನ, ಹಸಿವು ಮೆಟ್ಟಿದ ಓದಿನ ಹಾದಿ: ಅಂಚೆಯಣ್ಣನಿಂದ ಜಂಟಿ ನಿರ್ದೇಶಕನ ತನಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಜೀತದಾಳಾಗಿ ದುಡಿದ ತಂದೆ. ತಾಯಿ–ತಂದೆ ಹಾಗೂ ತಮ್ಮಂದಿರೊಂದಿಗೆ ಕೂಲಿ ಕಾರ್ಮಿನಾಗಿ ಕಬ್ಬು ಹೊತ್ತ ಬೆವರಿನ ಹಾದಿ. ರಜಾ ದಿನಗಳಲ್ಲಿ ತಂದೆಯ ಕೆಲಸವನ್ನು ತಾನೇ ಹೊತ್ತುಕೊಂಡ ಮಗ. ಮನೆ ಮನೆಗೆ ಅಂಚೆ ಪತ್ರ ತಲುಪಿಸಿದ ಅಂಚೆಯಣ್ಣನಿಂದ ಆರಂಭವಾದ ಸರ್ಕಾರಿ ಸೇವೆ. ನಂತರ ಶಿಕ್ಷಕ ವೃತ್ತಿ. ಅಲ್ಲಿಂದ ಕೆಎಎಸ್ ಅಧಿಕಾರಿ. ಇಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ.

ಇದು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ನಲ್ಲೂರು ಗ್ರಾಮದ ಡಾ. ಎನ್.ಆರ್. ಪುರುಷೋತ್ತಮ ಅವರ ಬದುಕಿನ ಪಯಣ. ಬಡತನ, ದುಡಿಮೆ ಮತ್ತು ಹೋರಾಟದ ನಡುವೆಯೂ ಶಿಕ್ಷಣವನ್ನು ಕೈಬಿಡದೆ ನಿರಂತರ ಪರಿಶ್ರಮದ ಮೂಲಕ ಆಡಳಿತ ಸೇವೆಯ ಉನ್ನತ ಜವಾಬ್ದಾರಿಗೆ ಏರಿದ ಅವರ ಬದುಕು ಗ್ರಾಮೀಣ ಯುವ ಜನರಿಗೆ ಸ್ಫೂರ್ತಿಯ ಕಥೆಯಾಗಿದೆ.

ಇಂದು ಅವರು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾಗಿ ರಾಜ್ಯ ಮಟ್ಟದ ಅಧಿಕಾರಿಯಾಗಿದ್ದಾರೆ. ಸಮುದಾಯದ ಹಿತಕ್ಕಾಗಿ ದುಡಿಯುತ್ತಿದ್ದಾರೆ. ಅವರ ಬದುಕಿನ ಹಾದಿಯನ್ನು ಒಮ್ಮೆ ಹಿಂದಿರುಗಿ ನೋಡಿದರೆ ಅದು ಕಲ್ಲು ಮುಳ್ಳಿನ ಹಾದಿ. ಕರ್ನಾಟಕ ರಕ್ಷಣಾ ವೇದಿಕೆಯಿಂದ ಕರ್ನಾಟಕ ಸಾರ್ವಭೌಮ ಪ್ರಶಸ್ತಿ ಪಡೆದಿರುವ ಪುರುಷೋತ್ತಮ ಅವರ ವ್ಯಕ್ತಿಚಿತ್ರ ಇದಾಗಿದೆ.

ರಾಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಯ ಮೊದಲ ಮಗನಾದ ಪುರುಷೋತ್ತಮ ಅವರು 1980ರ ಜುಲೈ 18ರಂದು ನಲ್ಲೂರು ಗ್ರಾಮದಲ್ಲಿ ಜನಿಸಿದರು. ಸರಳ ಗ್ರಾಮೀಣ ಕುಟುಂಬದಲ್ಲಿ ಬೆಳೆದ ಅವರು ಬಾಲ್ಯದಿಂದಲೇ ದುಡಿಮೆಯ ಬದುಕನ್ನು ಹತ್ತಿರದಿಂದ ಕಂಡವರು.



ಮಗ ಪಿಯುಸಿ ಓದುತ್ತಿದ್ದಾಗಲೂ ತಂದೆ ಜೀತದಾಳಾಗಿದ್ದರು. ರಜೆ ಬಂದಾಗಲೆಲ್ಲ ತಂದೆಯನ್ನು ಮನೆಗೆ ಕಳುಹಿಸಿ, ತಂದೆ ಮಾಡುತ್ತಿದ್ದ ಕೆಲಸವನ್ನು ತಾವೇ ನಿರ್ವಹಿಸುತ್ತಿದ್ದರು. ಕುಟುಂಬದ ಆರ್ಥಿಕ ಸ್ಥಿತಿಗೆ ಹೆಗಲು ನೀಡುವುದು ಅವರ ಪಾಲಿಗೆ ಅನಿವಾರ್ಯವಾಗಿತ್ತು. ಜೀತದಾಳಾಗಿ ಕೊಟ್ಟಿಗೆಯಲ್ಲಿ ಮಲಗಿದ್ದರೂ ಅದರ ಬಗ್ಗೆ ಯೋಚಿಸದೆ ಓದಿನ ಕಡೆಗೆ ಗಮನ ಹರಿಸಿದರು.

ಮುಂದೆ ತಂದೆ–ತಾಯಿ ಹಾಗೂ ತಮ್ಮಂದಿರೊಂದಿಗೆ ಸೇರಿ ಕಬ್ಬು ಕಡಿಯುವ ಕೆಲಸದಲ್ಲೂ ತೊಡಗಿಸಿಕೊಂಡರು. ಕಬ್ಬು ಕಡಿದು, ಅದನ್ನು ಲಾರಿಗಳಿಗೆ ಲೋಡ್ ಮಾಡಿ ಕಳುಹಿಸುವ ಕೆಲಸದಲ್ಲಿ ಪ್ರಮುಖ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದರು. ಓದಿನ ಜತೆಗೆ ದುಡಿಮೆಯನ್ನೂ ಮೈಗೂಡಿಸಿಕೊಂಡ ಈ ಅನುಭವವೇ ಮುಂದೆ ಅವರ ವ್ಯಕ್ತಿತ್ವದಲ್ಲಿ ಪರಿಶ್ರಮ ಮತ್ತು ಜವಾಬ್ದಾರಿಯ ಗುಣಗಳನ್ನು ಗಟ್ಟಿಗೊಳಿಸಿತು.

**ಗ್ರಾಮೀಣ ಅಂಚೆ ಸೇವಕನಿಂದ ಆರಂಭವಾದ ಸರ್ಕಾರಿ ಸೇವೆ**

ನಲ್ಲೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಅವರು, ಶ್ರೀನಿವಾಸಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣ ಪೂರ್ಣಗೊಳಿಸಿದರು. ಹಾಸನದ ಸರ್ಕಾರಿ ಕಲಾ ಕಾಲೇಜಿನಲ್ಲಿ ಪಿಯುಸಿ ಹಾಗೂ ಹೊಳೆನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದರು.

ಪದವಿ ಮುಗಿದ ಕೂಡಲೇ ಅವರು ಆರಂಭಿಸಿದ ಮೊದಲ ವೃತ್ತಿ ಗ್ರಾಮೀಣ ಅಂಚೆ ಸೇವಕ. ಹಳ್ಳಿ–ಹಳ್ಳಿ, ಮನೆ–ಮನೆ ತಿರುಗಿ ಅಂಚೆ ಪತ್ರಗಳನ್ನು ತಲುಪಿಸುವುದು ಅವರ ಮೊದಲ ಸರ್ಕಾರಿ ಕೆಲಸ. ಅಂಚೆ ವಿತರಕರಾಗಿ ಜನರ ಮನೆ ಬಾಗಿಲಿಗೆ ತೆರಳುತ್ತಿದ್ದ ಯುವಕನ ಪಯಣ ಮುಂದೆ ಆಡಳಿತದ ವಿವಿಧ ಹಂತಗಳಲ್ಲಿ ಜನರ ಕೆಲಸ ಮಾಡುವ ಅಧಿಕಾರಿಯ ಹಂತಕ್ಕೆ ಬೆಳೆದದ್ದು ವಿಶೇಷ.

**ಕನ್ನಡ ಶಿಕ್ಷಕ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ**

ಶಿಕ್ಷಣದ ಮಹತ್ವವನ್ನು ಅರಿತಿದ್ದ ಅವರು ತಮ್ಮ ವಿದ್ಯಾಭ್ಯಾಸವನ್ನೂ ಮುಂದುವರಿಸಿದರು. ಗ್ರಾಮೀಣ ಅಂಚೆ ಸೇವಕನಾಗಿ ಸರ್ಕಾರಿ ಕೆಲಸ ಆರಂಭಿಸಿದ ನಂತರವೂ ಓದಿನ ಹಸಿವು ಕಡಿಮೆಯಾಗಲಿಲ್ಲ. ಅದಾಗಲೇ ಶಿಕ್ಷಕರಾಗಿದ್ದ ಸೋದರ ಮಾವ ಎ.ಎಸ್. ರಂಗಸ್ವಾಮಿ ಮತ್ತು ಇತರ ಸೋದರ ಮಾವಂದಿರ ಮಾರ್ಗದರ್ಶನ ಸರಿ ದಾರಿಯಲ್ಲಿ ಹೆಜ್ಜೆ ಇರಿಸುವಂತೆ ಮಾಡಿತು. ಕೆಲಸ ಬಿಟ್ಟು ಓದು ಮುಂದುವರಿಸಿದರು.

ಕನ್ನಡ ಹಾಗೂ ಸಾರ್ವಜನಿಕ ಆಡಳಿತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ, ಬಿ.ಎಡ್. ಹಾಗೂ ಕೆ–ಸೆಟ್ (ಕನ್ನಡ) ಅರ್ಹತೆ ಗಳಿಸಿದರು. ಚನ್ನರಾಯಪಟ್ಟಣ ತಾಲ್ಲೂಕಿನ ಕಾಂತರಾಜಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕನಾಗಿ ಕೆಲಸ ಮಾಡಿದರು.

2008ರಲ್ಲಿ ಗೆಜೆಟೆಡ್ ಪ್ರೊಬೇಷನರ್(ಕೆಎಎಸ್) ಆಗಿ ಆಯ್ಕೆಯಾಗಿದ್ದು ಅವರ ವೃತ್ತಿಜೀವನದ ಮಹತ್ವದ ತಿರುವು. 2011ರಿಂದ 2017ರವರೆಗೆ ಹಾಸನ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕ ಹಾಗೂ ಉಪನಿರ್ದೇಶಕರಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು. ನಂತರ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಬೆಂಗಳೂರು ಕೇಂದ್ರ ಕಚೇರಿಯಲ್ಲಿ ಉಪನಿರ್ದೇಶಕನ ಹುದ್ದೆ ನಿಭಾಯಿಸಿದರು. 2019ರಿಂದ ಧಾರವಾಡದಲ್ಲಿ ಹಿಂದುಳಿದ ವರ್ಗಗಳ ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು. ಪ್ರಸ್ತುತ ಬೆಂಗಳೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಮೂಲಭೂತ ಸೌಕರ್ಯ ವಿಭಾಗದ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ನಿಲ್ಲದ ಜ್ಞಾನಾರ್ಜನೆ ಹಸಿವು**

ಆಡಳಿತ ಸೇವೆಯ ನಡುವೆಯೂ ಅವರ ಅಧ್ಯಯನದ ಆಸಕ್ತಿ ಮುಂದುವರಿಯಿತು. ಜಾನಪದ ಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನ ನಡೆಸಿದ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ಜಾನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ–ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ 2021ರಲ್ಲಿ ಪಿಹೆಚ್‌ಡಿ ಪದವಿ ಪಡೆದರು.

ಹೀಗಾಗಿ ಅವರ ಬದುಕಿನಲ್ಲಿ ಒಂದು ಕಡೆ ಆಡಳಿತ, ಮತ್ತೊಂದು ಕಡೆ ಸಾಹಿತ್ಯ–ಸಂಸ್ಕೃತಿಯ ಅಧ್ಯಯನ ಸಾಗುತ್ತ ಬಂದಿದೆ. ಗ್ರಾಮೀಣ ಬದುಕನ್ನು ಕೇವಲ ಅನುಭವಿಸಿದವರಲ್ಲದೆ, ಅದನ್ನೇ ಸಂಶೋಧನೆಯ ವಿಷಯವಾಗಿಸಿಕೊಂಡಿರುವುದು ಅವರ ಪಯಣದ ಮತ್ತೊಂದು ವಿಶೇಷ. ಅವರ ಸೇವೆ ಹುಡುಕಿಕೊಂಡು ಬಂದ ಪ್ರಶಸ್ತಿ ಪುರಸ್ಕಾರಗಳು ಹಲವು. 2017ರಲ್ಲಿ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಆಡಳಿತಾತ್ಮಕ ಸೇವೆಯ ಅನುಭವಕ್ಕಾಗಿ ರಾಷ್ಟ್ರೀಯ ಯುವ ಪ್ರಶಸ್ತಿ ಪಡೆದರು.

(2 ಪುಟಕ್ಕೆ.........................)

# ಗಾಂಧೀಜಿ ಕೇವಲ ನೆನಪಲ್ಲ ನಮ್ಮ ನಡೆ–ನುಡಿಯಲ್ಲಿರಲಿ!

## ಅಕ್ಟೋಬರ್ 2 ರ ಸಂದೇಶ ಇಂದಿಗೂ ಜೀವಂತ

ಅಕ್ಟೋಬರ್ 2 ಭಾರತಕ್ಕೆ ಅತ್ಯಂತ ಮಹತ್ವದ ದಿನ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮದಿನವನ್ನು ಗಾಂಧೀ ಜಯಂತಿಯಾಗಿ ಆಚರಿಸುವ ಈ ದಿನವನ್ನು ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಅಹಿಂಸಾ ದಿನವಾಗಿಯೂ ಗುರುತಿಸಿದೆ. ಸತ್ಯ,ಅಹಿಂಸೆ,ಸರಳತೆ, ಸ್ವಚ್ಛತೆ,ಶಿಸ್ತು ಮತ್ತು ಮಾನವೀಯತೆಯ ಮೌಲ್ಯಗಳನ್ನು ತಮ್ಮ ಜೀವನದ ಮೂಲಕ ಜಗತ್ತಿಗೆ ತೋರಿಸಿದ ಗಾಂಧೀಜಿಯನ್ನು ಸ್ಮರಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಶಾಲಾ–ಕಾಲೇಜುಗಳು, ಸರ್ಕಾರಿ ಕಚೇರಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳಲ್ಲಿ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದು, ಸರ್ವಧರ್ಮ ಪ್ರಾರ್ಥನೆ, ಭಜನೆ,ಭಾಷಣ,ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಗಳು,ಸ್ವಚ್ಛತಾ ಅಭಿಯಾನ,ಜಾಗೃತಿ ಕಾರ್ಯಕ್ರಮಗಳು ಮತ್ತು ಗಾಂಧೀಜಿಯವರ ಜೀವನಾಧಾರಿತ ನಾಟಕಗಳನ್ನು






ಆಯೋಜಿಸುವ ಮೂಲಕ ಅರ್ಥಪೂರ್ಣವಾಗಿ ಗಾಂಧೀ ಜಯಂತಿಯನ್ನು ಆಚರಿಸಬಹುದು.ಆದರೆ ಗಾಂಧೀಜಿಗೆ ಹೂಮಾಲೆ ಹಾಕಿ,ಭಾಷಣ ಮಾಡಿ ಮುಗಿಸುವುದೇ ನಿಜವಾದ ಆಚರಣೆಯಲ್ಲ;ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲಿಸುವ ಶ್ರೇಷ್ಠ ಗೌರವ.ಇಂದಿನ ವೇಗದ ಜಗತ್ತಿನಲ್ಲಿ ದ್ವೇಷ,ಹಿಂಸೆ, ಅಸಹನೆ ಮತ್ತು ಸ್ವಾರ್ಥ ಹೆಚ್ಚುತ್ತಿರುವ ಸಂದರ್ಭದಲ್ಲಿ ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಯ ಸಂದೇಶ ಇನ್ನಷ್ಟು ಪ್ರಸ್ತುತವಾಗಿದೆ. ಭಿನ್ನಾಭಿಪ್ರಾಯಗಳನ್ನು ಹಿಂಸೆಯಿಂದಲ್ಲ, ಸಂವಾದದಿಂದ ಪರಿಹರಿಸುವುದು, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವುದು, ಪ್ರಕೃತಿಯನ್ನು ಸಂರಕ್ಷಿಸುವುದು,ಎಲ್ಲರನ್ನು ಗೌರವಿಸುವುದು ಮತ್ತು ಸಮಾಜದ ಹಿತಕ್ಕಾಗಿ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ."ಗಾಂಧೀಜಿ ಕೇವಲ ಇತಿಹಾಸದ ಪುಟಗಳಲ್ಲಿ ಉಳಿಯಬಾರದು;ಅವರ ಸತ್ಯ ನಮ್ಮ ಮಾತಿನಲ್ಲಿ, ಅಹಿಂಸೆ ನಮ್ಮ ವರ್ತನೆಯಲ್ಲಿ ಮತ್ತು ಮಾ ನವೀಯತೆ ನಮ್ಮ ಕಾ ರ್ಯ ದಲ್ಲಿ ಕಾಣಿಸಿಕೊ ಳ್ಳಬೇಕು." ಇದೇ ಇಂದಿ ನ ಗಾಂಧೀ ಜಯಂತಿಯ ನಿಜವಾದ ಸಂದೇಶ.

ಅಂತೋಣಿ ಮುತ್ತು ವಿ
ಶಿಕ್ಷಕರು
7259675543

# ಸದೃಢ ಸಮಾಜ ನಿರ್ಮಾಣಕ್ಕೆ ಹೃದಯದ ಆರೋಗ್ಯ ಅತಿ ಮುಖ್ಯ

### ಹಾಸನದ ಜನಪ್ರಿಯ ಆಸ್ಪತ್ರೆಯಲ್ಲಿ ಅರ್ಥಪೂರ್ಣ 'ವಿಶ್ವ ಹೃದಯ ದಿನಾಚರಣೆ'

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಮ್ಮ ಹೃದಯದ ಆರೋಗ್ಯವೇ ನಮ್ಮ ಸಂಪತ್ತು. ಸದೃಢ ಸಮಾಜವನ್ನು ನಿರ್ಮಿಸಲು ಪ್ರತಿಯೊಬ್ಬರೂ ತಮ್ಮ ಹೃದಯದ ಬಗ್ಗೆ ಕಾಳಜಿ ವಹಿಸುವುದು ಅತ್ಯಗತ್ಯ ಎಂದು ನಗರದ ಜನಪ್ರಿಯ ಆಸ್ಪತ್ರೆಯ ಖ್ಯಾತ ಹೃದ್ರೋಗ ತಜ್ಞರಾದ ಡಾ. ಮಂಜುನಾಥ್ ಅಭಿಪ್ರಾಯಪಟ್ಟರು.

ಅವರು ಬುಧವಾರ ನಗರದ ಜನಪ್ರಿಯ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ 'ವಿಶ್ವ ಹೃದಯ ದಿನಾಚರಣೆ' ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. "1978ರಲ್ಲಿ ವರ್ಲ್ಡ್ ಹಾರ್ಟ್ ಫೆಡರೇಶನ್ ಸ್ಥಾಪನೆಯಾಗಿದ್ದು, ವಿಶ್ವಾದ್ಯಂತ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಸಲುವಾಗಿ 1999ರಲ್ಲಿ ಮೊದಲ ಬಾರಿಗೆ ವಿಶ್ವ ಹೃದಯ ದಿನವನ್ನು ಆಚರಿಸಲಾಯಿತು. ಆರೋಗ್ಯಕರ ಹೃದಯವು ನಿಮಗಾಗಿ ಮಾತ್ರವಲ್ಲದೆ, ನೀವು ಪ್ರೀತಿಸುವ ಪ್ರತಿಯೊಬ್ಬರಿಗೂ ಮಿಡಿಯುತ್ತದೆ. ಪ್ರತಿ ಹೃದಯ ಬಡಿತವೂ ಜೀವನದ ಅಮೂಲ್ಯತೆಯನ್ನು ನೆನಪಿಸುತ್ತದೆ. ಸಾರ್ವಜನಿಕರು ಒತ್ತಡವನ್ನು ನಿಯಂತ್ರಿಸಿ, ನಿಯಮಿತವಾಗಿ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಮಾಡಿಸಿಕೊಳ್ಳಬೇಕು. ಎದೆನೋವು ಕಾಣಿಸಿಕೊಂಡರೆ ನಿರ್ಲಕ್ಷಿಸದೆ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಿ. ನಿಮ್ಮ ಹೃದಯದ ಆರೋಗ್ಯ ಕಾಪಾಡುವುದೇ ಜನಪ್ರಿಯ ಆಸ್ಪತ್ರೆಯ ಮುಖ್ಯ ಸಂಕಲ್ಪವಾಗಿದೆ" ಎಂದು ಅವರು ವಿವರಿಸಿದರು.

**ಚಿಕಿತ್ಸೆಗಿಂತ ತಡೆಗಟ್ಟುವಿಕೆಯೇ ಉತ್ತಮ:**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜನಪ್ರಿಯ ಫೌಂಡೇಶನ್‌ನ ಮುಖ್ಯಸ್ಥರಾದ ಡಾ. ವಿ.ಕೆ ಅಬ್ದುಲ್ ಬಷೀರ್ ಅವರು ಮಾತನಾಡಿ, "ನಮ್ಮ ಆಸ್ಪತ್ರೆಯ ಹೃದ್ರೋಗ ತಜ್ಞರಾದ ಡಾ. ಮಂಜುನಾಥ್ ಅವರು ಅತ್ಯಂತ ಕಾಳಜಿಯುಳ್ಳ ಹೃದಯವಂತರು. ದೇಹದ ಪ್ರತಿಯೊಂದು ಅಂಗಾಂಗಗಳ ಕಾಳಜಿ ಬಲು ಅಗತ್ಯ. ನಾವು ನಮ್ಮ ದೇಹವನ್ನು ಚೆನ್ನಾಗಿ ನೋಡಿಕೊಂಡಷ್ಟೂ ಖುಷಿಯಿಂದ ಇರಲು ಸಾಧ್ಯ. ಹೀಗಾಗಿ ಪ್ರತಿ ಆರು




ತಿಂಗಳಿಗೊಮ್ಮೆ ಬಿಪಿ ಮತ್ತು ಶುಗರ್ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಿಕೊಳ್ಳಿ" ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, "ಹಾಸನ ಜಿಲ್ಲೆಯಲ್ಲಿಯೇ ಮೊಟ್ಟಮೊದಲ ಬಾರಿಗೆ ಹೃದ್ರೋಗ ಚಿಕಿತ್ಸಾ ವಿಭಾಗವನ್ನು ಪ್ರಾರಂಭಿಸಿದ ಹೆಗ್ಗಳಿಕೆ ನಮ್ಮ ಜನಪ್ರಿಯ ಆಸ್ಪತ್ರೆಗೆ ಸಲ್ಲುತ್ತದೆ. ಈ ವಿಶ್ವ ಹೃದಯ ದಿನದಂದು, ನಮ್ಮ ಹೃದಯವನ್ನು ಉತ್ತಮವಾಗಿ ನೋಡಿಕೊಳ್ಳಲು ಮತ್ತು ಆರೋಗ್ಯಕರ ಜೀವನವನ್ನು ನಡೆಸಲು ನಾವೆಲ್ಲರೂ ಪ್ರತಿಜ್ಞೆ ಮಾಡೋಣ" ಎಂದು ಕರೆ ನೀಡಿದರು.

**ಗಣ್ಯರ ಉಪಸ್ಥಿತಿ:**

ಕಾರ್ಯಕ್ರಮದಲ್ಲಿ ಜನಪ್ರಿಯ ಫೌಂಡೇಶನ್‌ನ ಉಪಾಧ್ಯಕ್ಷರಾದ ಶ್ರೀಮತಿ ಫಾತಿಮಾ ನಸ್ರೀನ್ ಬಶೀರ್, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಶಾರುಖ್ ಅಬ್ದುಲ್ಲಾ, ವಿವಿಧ ವಿಭಾಗಗಳ ತಜ್ಞ ವೈದ್ಯರಾದ ಡಾ. ಗೌತಮ್ (ನರರೋಗ ಶಸ್ತ್ರಚಿಕಿತ್ಸಕ), ಡಾ. ಮನೋಜ್ ಕುಮಾರ್ (ಫಿಸಿಷಿಯನ್), ಡಾ. ಪ್ರವೀಣ್ ಕುಮಾರ್ (ಜನರಲ್ ಸರ್ಜನ್), ಡಾ. ಸುಮಾ (ಸ್ತ್ರೀರೋಗ ತಜ್ಞೆ), ಡಾ. ಭರತ್ (ಮಕ್ಕಳ ತಜ್ಞ), ಡಾ. ಸುಹಾಸ್ (ಅರವಳಿಕೆ ತಜ್ಞ), ಡಾ. ಮುರಳಿಧರ್ (ಮೂತ್ರಪಿಂಡ ಶಸ್ತ್ರಚಿಕಿತ್ಸಕ), ಡಾ. ಶೋಯೆಬ್ (ದಂತ ತಜ್ಞ) ಹಾಗೂ ನಿವಾಸಿ ವೈದ್ಯರುಗಳಾದ ಡಾ. ಫೈಜಲ್, ಡಾ. ಲೋಹಿತ್, ಡಾ. ಪ್ರಕಾಶ್ ಮತ್ತು ಡಾ. ಚೇತನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಆಡಳಿತಾಧಿಕಾರಿ ಮಹಮ್ಮದ್ ಕಿಸಾರ್, ವ್ಯವಸ್ಥಾಪಕ ಪ್ರಮೋದ್ ಗೌಡ, ಆಸ್ಪತ್ರೆಯ ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಹಸಿವು ಮೆಟ್ಟಿದ ಓದಿನ ಹಾದಿ: ಅಂಚೆಯಣ್ಣನಿಂದ ಜಂಟಿ ನಿರ್ದೇಶಕನ ತನಕ

(1ನೇ ಪುಟದಿಂದ.....)

ಧಾರವಾಡದಲ್ಲಿ ಅತ್ಯುತ್ತಮ ಸರ್ಕಾರಿ ಸೇವಾ ಪ್ರಶಸ್ತಿಗೂ ಭಾಜನರಾದರು. ಪ್ರಶಸ್ತಿಗಳಿಗಿಂತ ಜನರಿಗೆ ಉಪಯೋಗವಾಗುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವುದೇ ಸೇವೆಯ ನಿಜವಾದ ಸಾರ್ಥಕತೆ ಎಂಬ ಮನೋಭಾವ ಅವರದು.

ಪುರುಷೋತ್ತಮ ಅವರು ತಮ್ಮ ಪಯಣದಲ್ಲಿ ಬಡತನವನ್ನು ನೆಪವಾಗಿಸಿಕೊಳ್ಳದೆ ಶಿಕ್ಷಣವನ್ನು ಮೆಟ್ಟಿಲಾಗಿಸಿಕೊಂಡರು. ದುಡಿಮೆಯನ್ನು ಶಕ್ತಿಯಾಗಿಸಿಕೊಂಡು, ನಿರಂತರ ಕಲಿಕೆಯನ್ನು ಬದುಕಿನ ಭಾಗವಾಗಿಸಿಕೊಂಡರು. ಇದು ಅವರ ಸಾಧನೆಗೆ ಮುಖ್ಯ ಅಂಶವಾಯಿತು.

ಪತ್ನಿ ಅರ್ಪಿತಾ ಪುರುಷೋತ್ತಮ ಹಾಗೂ ಮಕ್ಕಳಾದ ಶತಾಕ್ಷಿ ಪಿ. ನಲ್ಲೂರು ಮತ್ತು ಸನ್ಮಿತ್ರ ಪಿ. ನಲ್ಲೂರು ಅವರ ಕುಟುಂಬ ಜೀವನದ ಪ್ರಮುಖ ಆಧಾರವಾಗಿದ್ದಾರೆ.

ನಲ್ಲೂರಿನ ಮಣ್ಣಿನಲ್ಲಿ ಆರಂಭವಾದ ಕನಸು ಇಂದು ಆಡಳಿತದ ವಿಶಾಲ ಕ್ಷೇತ್ರದಲ್ಲಿ ಹೆಜ್ಜೆಗುರುತು ಮೂಡಿಸಿದೆ. ಅವರ ಬದುಕು ಕೇವಲ ಒಬ್ಬ ಅಧಿಕಾರಿಯ ವೃತ್ತಿ ಸಾಧನೆಯಲ್ಲ. ಗ್ರಾಮೀಣ ಬದುಕಿನ ಕಷ್ಟಗಳನ್ನು ಎದುರಿಸುತ್ತಲೇ ಶಿಕ್ಷಣದ ಮೂಲಕ ಸ್ವಂತ ದಾರಿಯನ್ನು ನಿರ್ಮಿಸಿಕೊಂಡ ವ್ಯಕ್ತಿಯ ಕಥೆ.

ಅವರ ಸಹೋದರ ಎನ್.ಆರ್.ಜಯರಾಮ್ ಅವರು ಅಣ್ಣನ ಹಾದಿಯಲ್ಲೇ ಸಾಗಿದರು. ಅವರೀಗ ವಾಣಿಜ್ಯ ತೆರಿಗೆ ಇಲಾಖೆಯ ಡೆಪ್ಯೂಟಿ ಕಮಿಷನರ್. ಕಿರಿಯ ಸಹೋದರ ಎನ್.ಆರ್.ಸಂತೋಷ್ ಅವರು ಪ್ರಥಮ ದರ್ಜೆ ಗುತ್ತಿಗೆದಾರ. ಪುರುಷೋತ್ತಮ್ ಅವರ ಮಾರ್ಗದರ್ಶನದಲ್ಲಿ ಗೆಜೆಟೆಡ್ ಪ್ರೊಬೆಷನರಿ ಹುದ್ದೆ ಪಡೆದವರು ಹಲವರು. ಅವರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಅಸಿಸ್ಟೆಂಟ್ ಕಮಿಷನರ್ ಚನ್ನಕೇಶವ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್‌ಕುಮಾರ್ ಪ್ರಮುಖರು.

ಹುಟ್ಟಿದ ಪರಿಸ್ಥಿತಿ ನಮ್ಮ ಗಮ್ಯವನ್ನು ನಿರ್ಧರಿಸುವುದಿಲ್ಲ; ಕಲಿಯುವ ಹಂಬಲ, ದುಡಿಯುವ ಮನಸ್ಸು ಮತ್ತು ಗುರಿ ಸಾಧಿಸುವ ಛಲ ನಮ್ಮ ದಾರಿಯನ್ನು ಬದಲಿಸಬಲ್ಲದು ಎಂಬ ಸಂದೇಶವನ್ನು ಡಾ. ಎನ್.ಆರ್. ಪುರುಷೋತ್ತಮ ಅವರ ಜೀವನ ಪಯಣ ಸಾರುತ್ತದೆ.

## ಅ.4 ರಂದು ಪೌರಾಣಿಕ ನಾಟಕ–ಗುರು ವಂದನೆ

ಹಾಸನ: ನಗರದ ಲಕ್ಷ್ಮಿ ಜನಾರ್ದನ ಸಂಘದಿಂದ ಅನಂತ ಪೂರ್ಣಿಮೆ ಮತ್ತು ಗುರುಪೂರ್ಣಿಮೆ ಅಂಗವಾಗಿ ಇದೇ 4 ಭಾನುವಾರದಂದು ಬೆಳಗ್ಗೆ ಗುರುವಂದನೆ ಮತ್ತು ಶ್ರೀ ಸಂಪೂರ್ಣ ರಾಮಾಯಣ ಸುಂದರ ಪೌರಾಣಿಕ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಪುರೋಹಿತ ರಾಮಪ್ರಸಾದ್ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶ್ರೀ ಕ್ಷೇತ್ರ ಸಾಲಿಗ್ರಾಮದ ಶ್ರೀ ಧನುರ್ದಾಸ ರಾಮಾನುಜಜೀಯರ್ ಸ್ವಾಮೀಜಿ

ಹಾಗೂ ಶ್ರೀ ಕ್ಷೇತ್ರ ಬೆಲಗೂರಿನ ಶ್ರೀ ವಿಜಯಮಾರುತಿ ಶರ್ಮ ದಿವ್ಯ ಸಾನಿಧ್ಯವಹಿಸುವರು. ಅಮೋಘ್‌ವಾಹಿನಿ ಮುಖ್ಯಸ್ಥರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಘಟನಾ ಕಾರ್ಯದರ್ಶಿ ಕೆ.ಪಿ.ಎಸ್.ಪ್ರಮೋದ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು. ಸಮಾಜ ಸೇವಕರಾದ ಎನ್.ಎನ್.ನಾಗಭೂಷಣ, ಜ್ಯೋತಿ ಅನಿಲ್ ಕುಮಾರ್ ಮೊದಲಾದವರು ಭಾಗವಹಿಸುವರು. ನಗರ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಪಿಎಸ್.ವೆಂಕಟೇಶ್ ಅಧ್ಯಕ್ಷತೆ ವಹಿಸುವರು ಎಂದರು. ಅಂಚೆ ನಿವೃತ್ತ ನೌಕರ ಹೆಚ್.ಕೆ.ಸತ್ಯನ್ ಮಾತನಾಡಿ, ಈ ಬಾರಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಇದರಿಂದ ರೈತರಿಗೆ ಅನೇಕ ರೀತಿಯ ತೊಂದರೆ ಆಗಿದೆ. ಮುಂದೆ ಭಗವಂತ ಕರುಣೆ ನೀಡಿ ಉತ್ತಮ ಮಳೆ ಬೆಳೆ ಕೊಡಲಿ ಎಂದು ಪ್ರಾರ್ಥಿಸಲು ಈ ನಾಟಕ ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದರು.ನಿವೃತ್ತ ಶಿಕ್ಷ ಶ್ರೀನಿವಾಸ್ ಪ್ರಸಾದ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಹುತೇಕರು ಮೊಬೈಲ್ಸಂಸ್ಕೃತಿಗೆ ಒಳಗಾಗಿ ಕಲೆ, ಸಂಸ್ಕೃತಿ ಹಾಗೂ ಪೌರಾಣಿಕ ಕತೆಗಳತ್ತ ತಿರುಗು ನೋಡುತ್ತಿಲ್ಲ. ಅಳಿದು ಹೋಗುತ್ತಿರುವ ನಮ್ಮ ಸಂಸ್ಕೃತಿ–ಕಲೆ ಉಳಿಸಲು ಪ್ರೇರೇಪಿಸುವುದು ನಮ್ಮ ಈಕಾರ್ಯಕ್ರಮದ ಉದ್ದೇಶ ಎಂದರು. ನಿವೃತ್ತ ಪೊಲೀಸ್ ಅಧಿಕಾರಿ ಸಿ.ಡಿ.ಜಗದೀಶ್ ಮಾತನಾಡಿ, ಪೌರಾಣಿಕ ಕಲೆಯನ್ನು ಉಳಿಸುವುದು ನಾಟಕ ಪ್ರದರ್ಶನದ ಉದ್ದೇಶ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 15 ಮಂದಿಯನ್ನು ಸನ್ಮಾಣಿಸಲಾಗುವುದು ಎಂದು ತಿಳಿಸಿದರು.

## ಪಥಸಂಚಲನದಲ್ಲಿ ದ್ವಿತೀಯ ಸ್ಥಾನ: ಯುವ ರೆಡ್‌ಕ್ರಾಸ್ ಸ್ವಯಂಸೇವಕರಿಗೆ ಸನ್ಮಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: 80ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಡೆದ ಜಿಲ್ಲಾ ಮಟ್ಟದ ಪಥಸಂಚಲನದಲ್ಲಿ ದ್ವಿತೀಯ ಸ್ಥಾನ ಪಡೆದ ಯುವ ರೆಡ್‌ಕ್ರಾಸ್ ಘಟಕದ ಸ್ವಯಂಸೇವಕರಿಗೆ ನಗರದ ರೆಡ್‌ಕ್ರಾಸ್ ಭವನದಲ್ಲಿ ಬುಧವಾರ ಪ್ರಶಸ್ತಿ ಪ್ರದಾನ ಹಾಗೂ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆ, ಎನ್.ಡಿ.ಆರ್.ಕೆ. ಪ್ರಥಮ ದರ್ಜೆ ಕಾಲೇಜು ಹಾಗೂ ಅಧ್ಯಯನ ಪದವಿ ಪೂರ್ವ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ 'ಪ್ರಜಾವಾಣಿ' ದಿನಪತ್ರಿಕೆಯ ಮುಖ್ಯ ವರದಿಗಾರ ಚಿದಂಬರ ಪ್ರಸಾದ್, "ವಿದ್ಯಾರ್ಥಿಗಳು ಕೇವಲ ವ್ಯಾಸಂಗಕ್ಕೆ ಸೀಮಿತವಾಗದೆ, ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಸೇವಾ ಕಾರ್ಯಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.



ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಗ್ರಾಮೀಣ ಭಾಗದ ಹೆಚ್ಚಿನ ವಿದ್ಯಾರ್ಥಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರಗಳ ಸೌಲಭ್ಯ ದೊರೆಯುವಂತಾಗಬೇಕು" ಎಂದು ಆಶಿಸಿದರು.

**ಸೇವಾ ಮನೋಭಾವ ಶ್ಲಾಘನೀಯ:**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖಾ ಸಭಾಪತಿ ಎಚ್.ಪಿ. ಮೋಹನ್ ಮಾತನಾಡಿ, "ಜಿಲ್ಲಾ ಮಟ್ಟದ ಪಥಸಂಚಲನದಲ್ಲಿ ವಿದ್ಯಾರ್ಥಿಗಳು ಶಿಸ್ತು, ಸತತ ಪರಿಶ್ರಮ ಹಾಗೂ ಸೇವಾ ಮನೋಭಾವದಿಂದ ಪಾಲ್ಗೊಂಡು ದ್ವಿತೀಯ ಸ್ಥಾನ ಪಡೆದಿರುವುದು ಅತ್ಯಂತ ಶ್ಲಾಘನೀಯ. ವಿದ್ಯಾರ್ಥಿಗಳ ಆಸಕ್ತಿ ಹಾಗೂ ತರಬೇತುದಾರರ ಕೌಶಲ ಮೆಚ್ಚುವಂತಹುದು. ಮುಂದೆಯೂ ರೆಡ್ ಕ್ರಾಸ್ ಸಂಸ್ಥೆಯ ವಿವಿಧ ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಯಶಸ್ಸಿನತ್ತ ಸಾಗ ಬೇಕು" ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವತಿಯಿಂದ ಕಿರು ಕಾಣಿಕೆ ನೀಡಿ, ಪ್ರಶಸ್ತಿ ಪತ್ರ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಅಧ್ಯಯನ ಪಿಯು ಕಾಲೇಜಿನ ಪ್ರಾಂಶುಪಾಲ ಎಚ್.ಜಿ. ಮೋಹನ್ ಹಾಗೂ ಎನ್.ಡಿ.ಆರ್.ಕೆ. ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಮಧು ಕೆ.ಆರ್. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ವೇದಿಕೆಯಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳಾದ ಶಬ್ಬೀರ್ ಅಹ್ಮದ್, ಜಯೇಂದ್ರ ಕುಮಾರ್, ಅಮ್ಜದ್ ಖಾನ್, ಎಚ್.ಡಿ. ಕುಮಾರ್, ಸುಬ್ಬಸ್ವಾಮಿ, ಉದಯ್ ಕುಮಾರ್, ಗಿರೀಶ್, ಭೀಮರಾಜ್, ಮಮತಾ ಪಾಟೀಲ್, ಬಿ.ಇ. ಶಿವರಾಮೇಗೌಡ, ಡಾ. ರವಿಕುಮಾರ್ ಬಿ.ಎಸ್., ಪಿಎಸ್ಐ ಚಂದ್ರಯ್ಯ, ಮುಖ್ಯಪೇದೆ ರಾಜೇಗೌಡ ಹಾಗೂ ತಾಲ್ಲೂಕು ಸಭಾಪತಿ ಜಯಪ್ರಕಾಶ್ ಸೇರಿದಂತೆ ಗಣ್ಯರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಫಿಕ್ಸ್‌ಗೇನೆ ಮಾಡ್ಕಂಬಿಟ್ಟೆ–2

"ಹಲಸಿನಕಾಯಿಗೆ ಸುಲಿಕೆ ಹಾಕಬೇಡ್ರೋ ನನ್‌ಮಕ್ಕಾ, ನೀವೇ ತಿನ್ರಂತೆ. ಹಾಳಾಗಿ ಹೋಗ್ತಾವೆ ಕಣ್ರಾ, ಮುಂದಿನ್ ವಾರಾನೂ ಬದುಕಿರ್ತೀರಲ್ಲ, ಅವಾಗ್ಲೇ ಕೆಡವಿಕೊಂಡು ಸ್ವಾಡೆಗಟ್ಲೆ ತಿನ್ರಂತೆ, ಸುಲ್ಕೆ ಹಾಕಿ ಸಾಯ್ಬೇಡಿ" ಎಂದು ಕಾಳಮ್ಮ ಮರ್ಗಸಿ ಮಾಡಕ್ಕೆ ಮರಹತ್ತಿದ ಮುಂಡೇಡಿ ಮತ್ತು ದಾರದಳ್ಳಿ ಕಾಳನಿಗೆ ಹಿಗ್ಗಾಮುಗ್ಗಾ ಬೈದಳು. 'ಹೂ ಕಣಮ್ಮಾರೇ' ಎಂದು ಹರಿತವಾದ ಬಟ್‌ಗತ್ತೀಲಿ ಹಲಸಿನಮರದ ಕೊನೆ ಕಡಿಯುತಿದ್ದ ಕಾಳ ಕೆಡವಿದ ಬಕ್ಕೆ ಹಲಸಿನಕಾಯಿ ಯಾವತ್ತೋ ಸುಲಿಕೆ ಹಾಕಿದರಿಂದ ಮರದಲ್ಲೇ ಅರ್ಧ ಕೊಳೆತಿತ್ತು. ದಪ್ ಎಂದು ಬಿದ್ದು ಅಪ್ಪಚ್ಚಿಯಾದ ಹಲಸಿನಹಣ್ಣನ್ನು ಕಂಡ ಕಾಳಮ್ಮ "ಮ್ಯಾಲೇ ಇದ್ದಿದ್ರೆ ಅಳಿಲೋ, ಕಬ್ಬೆಕ್ಕೋ ತಿಂತಿದ್ವಲ್ರಲಾ, ಯಂತಕ್ರಲಾ ಕೆಡ್ಗಿದ್ರಿ?"

"ಕೆಳೀಕೆ ಬಿದ್ರೆ ಈ ಹಡಬೇ ದನ, ಹಲಸಿನಹಣ್ಣು ತಿನ್ನಕ್ಕೆ ಬೇಲಿ ಮುರ್ದು ಒಳೀಕೆ ನುಗ್ತಾವೆ. ಮನೀಹಾಳು ಕೆಲ್ಸ ಮಾಡ್ತಿರಲ್ಲ, ಮುಂಡೇಗಂಡ್ರಾ" ಎಂದು ಗದರಿದಳು. ಗೂರಲು ರೋಗ ಬಂದು ವರ್ಷಾನುಗಟ್ಟಲೆ ದಮ್ಮು ಹಿಡಿದು ಕೆಮ್ಮಿ ಕೆಮ್ಮಿ ತಲೆ–ಮಿದುಳೆಲ್ಲಾ ಮೊಸರು ಮಾಡಿಕೊಂಡು ಕೊನೆಗೂ ಈಗ್ಗೆ ಹನ್ನೊಂದು ವರ್ಷಗಳ ಹಿಂದೆ ಇಹಲೋಕ ತ್ಯಜಿಸಿದ್ದ ಈ ಕಾಳಮ್ಮನ ಗಂಡ ಗಿಡ್ಡಪ್ಪ, ಪಟೇಲಿಕೆಯ ನೆಪದಲ್ಲಿ ಊರವರಿಗೆ ಕೊಡಬಾರದ ಕಿರುಕುಳ ಕೊಟ್ಟಿದ್ದ. ಈತನ ಸಾವನ್ನು ಸಂಭ್ರಮಿಸಿದವರೇ ಹೆಚ್ಚು. ಅದೆಂಥಾ ವಿಚಿತ್ರವೆಂದರೆ ಈ ಊರ್ಹಾಳ ಗಿಡ್ಡಪ್ಪನಿಗೆ ಹೆಂಡತಿಯಾಗಿ ಸಿಕ್ಕವಳು ಸಾಕ್ಷಾತ್ ದೇವತಾಸ್ವರೂಪಿ ಕಾಳಮ್ಮ. ಇಡೀ ಊರಿನ ಜನ ಗ್ರಾಮದೇವತೆ ದುರ್ಗಾಪರಮೇಶ್ವರಿಗೆ ತೋರುತಿದ್ದ ಗೌರವವನ್ನು ಮನುಷ್ಯರೂಪಿ ಕಾಳಮ್ಮನಿಗೆ ತೋರುತಿದ್ದರು. ಮನೆಗೆ ಬಂದ ಯಾರನ್ನೇ ಆದರೂ ಪ್ರೀತಿ–ಗೌರವದಿಂದ ಕಂಡು ತನ್ನ ಹೊಟ್ಟೆಯಲ್ಲೇ ಹುಟ್ಟಿದ ಮಕ್ಕಳನ್ನು ಸಂತೈಸುವಂತೆ ಮಾತನಾಡಿ ಕಾಫಿಯನ್ನೋ ಮಜ್ಜಿಗೆಯನ್ನೋ ನೀಡಿ ಆಧರಿಸುತಿದ್ದಳು. ಇಂತಿಪ್ಪ ಕಾಲದಲ್ಲಿ ಮಕ್ಕಳಿಲ್ಲದೇ ಸತ್ತಿದ್ದ ಗಿಡ್ಡಪ್ಪನ ಒಬ್ಬನೇ ತಮ್ಮನಾಗಿದ್ದ ಪುಟ್ಸ್ವಾಮಿಯು, ತನ್ನ ಅತ್ತಿಗೆ ಕಾಳಮ್ಮನೂ ಸಹಾ ಯಾವುದಾದರೂ ಕಾರಣದಿಂದ ಇಹಲೋಕ ತೊರೆದಲ್ಲಿ ಸಮಸ್ತ ಕುರುಕುಲಕ್ಕೆ ಒಡೆಯನಾಗಬಹುದೆಂದು ಸದ್ದಿಲ್ಲದೇ ಹೊಂಚುಹಾಕುತಿದ್ದನು.

ಮೂಡ್ಗೆರೆ ಸಂತೇಲಿ ಸಿಕ್ಕ ಕಡಿದಾಳು ಪುಟ್ಟಸ್ವಾಮಿಯನು ನೋಡಿ "ಏನ್ ಮಾರಾಯ್ರೇ? ಪೇಟೇಲಿ ನಿಮ್ಮುನ್ ನೋಡಿ ಬಹಳ ದಿನ ಆಯ್ತಲ್ಲ,



ಮಳೆ ಹೆಂಗೆ ನಿಮ್ಕಡೆ" ಎಂದರು ಬೇಲೂರಿನ ಕಾಯಿ ವ್ಯಾಪಾರಿ ಗಿರಿಯಪ್ಪ.

"ಎಂಥಾ ಮಾಡೋದು, ವಿಪರೀತ ಮಳೆ, ಗದ್ದೆ ನಟ್ಟಿ, ಹಳಾ–ಕಳೆ ಇದರಲ್ಲೇ ಹೊತ್ತಾರೆ ಬೈಗಾಗ್ತದೆ."

"ಸಂತೆಗಾದ್ರೂ ಸಾಮಾನ್ ಸರಂಜಾಮು ತಗೊಳ್ಳಲು ಬರ್ಬೋದಿತ್ತಲಾ, ಹೋದ್ವಾರ ಭೂತಾಯಿ ಮೀನ್ ಸಕತ್ ಅಗ್ಗ ಇದ್ವು."

"ಆದ್ರೆ ನಾವ್ ಪ್ಯಾಟೆಯಿಂದ ಉಪ್ಪು , ಬೆಲ್ಲ, ಬಟ್ಟೆ ಬಿಟ್ರೆ ಬೇರೆನನ್ನು ತೊಗೊಂಡು ಹೋಗಲ್ಲ."

ಹೌದು ಮಲೆನಾಡಿನ ಕೃಷಿಕನ, ಜನಸಾಮಾನ್ಯನ ಅವಶ್ಯಕತೆಗಳು ಮಿತವಾಗಿದ್ದು, ಸರಳವಾಗಿ ತನ್ನ ಗದ್ದೆ, ತೋಟ ಹಾಗೂ ಸುತ್ತಲಿನ ಪರಿಸರದಿಂದಲೇ ಕಡಿಮೆ ಶ್ರಮದಿಂದ ಪೂರೈಸಿಕೊಳ್ಳುತ್ತಿದ್ದ.

ಇನ್ನೇನು ಮಳೆಗಾಲ ಪ್ರಾರಂಭವಾಗುತ್ತಿದೆ ಎಂದ ಕೂಡಲೇ ಬಿದಿರಿನ ಕಳಿಲೆ ತಲೆ ಎತ್ತುತ್ತಿದ್ದವು. ಬಿದಿರಲ್ಲಿ ವಾಟೆ ಬಿದಿರು, ಹೆಬ್ಬಿದಿರು, ಬಣ್ಣದ ಬಿದಿರು, ಕಿರು ಬಿದಿರು ಮುಂತಾದ ನಾನಾ ಪ್ರಭೇದಗಳಿವೆ. ಈ ಬಿದಿರನ್ನು ಬಿದಿರಿನ ಮಣಕೆಯಿಂದ ಬಿಡಿಸಿ ತರುವುದು ಸುಲಭದ ಮಾತೇನಲ್ಲ. ಅಭ್ಯಾಸವಿರುವವರಿಗೇ ಆ ಬಿದುರಿನ ವ್ಯೂಹವನ್ನು ಬಿಡಿಸಿ ಮೃದುವಾದ ಎಳೆಬಿದಿರಿನ ಮೊಳಕೆಯನ್ನು ಕೊಯ್ದು ತರುವುದು ಪ್ರಯಾಸದ ಕೆಲಸ. ಜೊತೆಗೆ ರಕ್ತ ಹೀರುವ ಜಿಗಣೆಯ ಕಾಟ ಬೇರೆ. ಹೀಗೆ ಸಂಗ್ರಹಿಸಿ ತಂದ ಕಳಲೆಯನ್ನು ಸಂದರ್ಭಾನುಸಾರ ಹುಳಿಗಳಿಲೆ, ಕುಡಿಗಳಿಲೆ, ಸೀಗಳಿಲೆ, ಜಜ್‌ಗಳಿಲೆ ಮುಂತಾದ ಸಾರುಗಳು, ಪಲ್ಯ ಹಾಗೂ ಉಪ್ಪಿನಕಾಯಿಯನ್ನಾಗಿ ಬಳಸುವುದಿದೆ. ಇವುಗಳಿಗೆ ಜೊತೆಯಾಗಿ ಲಭ್ಯ ತರಕಾರಿ ಕಾಳುಗಳನ್ನು ಹಾಗೂ ಹುಚ್ಚೆಳ್ಳನ್ನು ಬೆರೆಸಿ ಗಮ್ಮೆನ್ನುವ ಖಾದ್ಯಗಳನ್ನು ತಯಾರಿಸುವುದು ರೂಢಿಯಲ್ಲಿದೆ.

ಪುಟ್ಸ್ವಾಮಿ, "ಬಿದಿರಿನಿಂದ ತಯಾರಿಸ್ತಿದ್ದ ಪಟ್ಲುಕೋವಿ ನಿಮಗೆ ಗೊತ್ತಾ ಶೆಟ್ರೆ? ಬಿದಿರು ಹಾಗೂ ಅದರ ಸೋದರ ಸಂಬಂಧಿ ಬೆತ್ತದಿಂದ ಚಿತ್ತಾರದ ಬುಟ್ಟಿಗಳನ್ನು ತಯಾರಿಸುತ್ತಿದ್ದ ಮೇದರ ಜನಾಂಗವೇ ಈಗ ಆಧುನಿಕತೆಯ ಹುಚ್ಚುಹೊಳೆಯಲ್ಲಿ ಕೊಚ್ಚಿ ಹೋಗಿರುವುದು ನೋಡ್ತಿದೀರಲ. ಅವರ ಕರಕುಶಲತೆಗೆ ಜೀವಂತ ನಿದರ್ಶನವಾಗಿ ಜೀವನಾಧಾರವಾಗಿದ್ದ ಬುಟ್ಟಿ ನೇಯ್ಗೆಯನ್ನು ಪ್ಲಾಸ್ಟಿಕ್ ಹಾಗೂ ರಬ್ಬರ್ ಕುಕ್ಕೆಗಳು ನುಂಗಿ ಹಾಕಿರುವುದಕ್ಕೆ ನಾವು ನೀವೆಲ್ಲರೂ ಸಾಕ್ಷಿಗಳಾಗಿದ್ದೇವೆ. ತೋಟಗಳನ್ನು ವಿಸ್ತರಿಸುವ ನೆಪದಲ್ಲಿ ಬಿದಿರು ಮೆಳೆಗಳನ್ನು ಸುಟ್ಟುಹಾಕಿದ್ದು ನಮ್ಮ ಮೂರ್ಖತನ. ಅದಕ್ಕೆ ಸರಿಯಾಗಿ ಈ ವರ್ಷ ಬಿದಿರಿನಲ್ಲಿ ಹೂವಾಗಿರುವುದರಿಂದ ಸದ್ಯಕ್ಕೆ ಕಳಿಲೆ ತಿನ್ನುವ ಅವಕಾಶವೂ ಇಲ್ಲವಾಗಿದೆ.

ಆಹಾರವಾಗಿ ವರ್ಷವಿಡಿ ಸಿಗೋ ಇನ್ನೊಂದು ಕೊಡುಗೆಯೇ ಕೆಸ. ಹಳ್ಳ, ಕೆರೆಯ ಬದುಗಳಲ್ಲಿ ಯಾವುದೇ ಕೃಷಿಯ ಅವಶ್ಯಕತೆ ಇಲ್ಲದೆ ಬೆಳೆಯುವ ಈ ಸಸ್ಯದಲ್ಲಿ ನೆಟ್ಟಿಕೆಸ, ಹಾಲ್ಗೆಸ, ನೀರ್ಗೆಸಗಳಲ್ಲದೆ ಮರದ ಮೇಲೆ ಬೆಳೆಯುವ ಮರಗೆಸ ಸಹ ಇದೆ. ಎಲೆಯನ್ನು ಗಂಟು ಹಾಕಿ ಸಾರು, ಪಲ್ಯ ಅದರ ಗಂಟಿನಿಂದ ಹುಳಿ, ಮಜ್ಜಿಗೆ ಹುಳಿ, ಪತ್ರೊಡೆ ತಯಾರ್ಮಾಡ್ತೀವಿ. ಕೆಸುವಿನ ಗೆಡ್ಡೆಯನ್ನು ಆಲೂಗೆಡ್ಡೆಗೆ ಪರ್ಯಾಯವಾಗಿ ಬಳಸುವುದು ಸಹ ತಲಾಂತರಗಳಿಂದ ನಡೆದಿದೆ. ಕೆಸುವಿನ ಗಂಟು ಹಾಕುವುದು ಒಂದು ಕಲೆ, ದಂಟು ಮುರಿದು, ಒರೆಸಿ, ಎಲೆಯನ್ನು ಸವರಿ ಅದರೊಳಗೆ ದಂಟು ಸೇರಿಸಿ ಸುತ್ತಿ ಗಂಟು ಹಾಕಿ ಬಾಡಿಸಿ, ಬೇಯಿಸಿ ನೀರುಚೆಲ್ಲಿ ಬೆಳ್ಳುಳ್ಳಿ ಒಗ್ಗರಣೆ ಹಾಕಿದರೆ ಅದರ ಕತೆಯೇ ಬೇರೆ, ಬಿಡಿ.

ಮುಂದುವರಿಯುವುದು..

## ಇತಿಹಾಸದಲ್ಲಿ ಈ ದಿನ

### ಅಕ್ಟೋಬರ್ 2

**1869:** ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಗುಜರಾತ್‌ನ ಪೋರಬಂದರ್‌ನಲ್ಲಿ ಜನಿಸಿದರು. ಅವರ ಜನ್ಮದಿನವನ್ನು ಭಾರತದಲ್ಲಿ ಗಾಂಧಿ ಜಯಂತಿಯಾಗಿ ಆಚರಿಸಲಾಗುತ್ತದೆ.

**1904:** ಭಾರತದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಉತ್ತರ ಪ್ರದೇಶದ ಮುಘಲ್ಸರಾಯ್‌ನಲ್ಲಿ ಜನಿಸಿದರು.

**2007:** ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದ ಬಳಿಕ ಅಕ್ಟೋಬರ್ 2ನ್ನು ಅಂತರರಾಷ್ಟ್ರೀಯ ಅಹಿಂಸಾ ದಿನವಾಗಿ ವಿಶ್ವದಾದ್ಯಂತ ಆಚರಿಸಲಾಗುತ್ತಿದೆ.

ನಿಧನ

**1971:** ಜಯಪ್ರಕಾಶ್ ನಾರಾಯಣ ಅವರ ಪತ್ನಿ ಪ್ರಭಾವತಿ ದೇವಿ

**1985:** ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಮಾಜವಾದಿ ನಾಯಕ ಜಯಪ್ರಕಾಶ್ ನಾರಾಯಣ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248